3)	ಕರ್ನಾಟಕ ಆಂಟಿಬಿಯಾಟಿಕ್ಸ್ ಲಿ.	11.82
4)	ಕರ್ನಾಟಕ ಬೆಲಾದ್ ಆಟೋ ಲಿ.	0.90
5)	ವಿಕ್ರಾಂತ್ ಟೈರ್ಸ್ ಲಿಮಿಟೆಡ್	200.00
6)	ಯುಕೇನ್ ಇಂಡಿಯಾ ಲಿಮಿಟೆಡ್	5.41
7)	ಸಹ್ಯಾದ್ರಿ ಇಂಡಸ್ಟ್ರೀಯಲ್ಲಿ ಗ್ಯಾಸಸ್ ಲಿ.	1.85
	ಒಟ್ಟು	**288.18**

ಇ) ಯೋಜನಾ ವರದಿಯನ್ನು ತಯಾರಿಸಿದ ನಂತರ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಪ್ರಮುಖ ದಿನಪತ್ರಿಕೆಗಳಾದ ಡೆಕಾನ್ ಹೆರಾಲ್ಡ್ ಎಕಾನಾಮಿಕ್ ಟೈಮ್ಸ್, ಪ್ರಜಾವಾಣಿ, ಫೈನಾನ್ಷಿಯಲ್ ಎಕ್ಸ್‌ಪ್ರೆಸ್‌ಗಳಲ್ಲಿ ಜಂಟಿಯಾಗಿ ಉದ್ಯಮವನ್ನು ಸ್ಥಾಪಿಸಲು ಆಹ್ವಾನಿಸಿ ಪ್ರಕಟಿಸಲಾಗುವುದು.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮದಿಂದ ರಚಿಸಲ್ಪಟ್ಟ ಉಪ ಸಮಿತಿಯ ನಿರ್ದೇಶಕ ಮಂಡಳಿಯು ಉದ್ಯಮದಾರರ ಆರ್ಥಿಕ ಸ್ಥಿತಿ ಉದ್ಯೋಗ ಪ್ರಾವಿಣ್ಯತೆ, ಹಾಗೂ ಇತರೆ ಹಿನ್ನೆಲೆಗಳ ಆಧಾರದ ಮೇಲೆ ಸಂದರ್ಶನ ನಡೆಸಿ, ಜಂಟಿ ಉದ್ಯಮದಾರರನ್ನು ಆಯ್ಕೆ ಮಾಡಲಾಗುವುದು. ಉಪ ಸಮಿತಿಯ ನಿರ್ದೇಶಕರ ಮಂಡಳಿಯ ತೀರ್ಮಾನವನ್ನು ಜಂಟಿ ಉದ್ಯಮದಾರರಿಗೆ ತಿಳಿಸುವ ಮುನ್ನ ಮಂಡಳಿಯ ಅನುಮೋದನೆಯನ್ನು ಪಡೆಯಲಾಗುವುದು. ಸ್ಥಳೀಯ ಉದ್ಯಮದಾರರಿಗೆ ಆದ್ಯತೆ ನೀಡಲಾಗುವುದು.

ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಅವರಿಂದ ರೆಕ್ಟಿಫೈಡ್ ಸ್ಪಿರಿಟ್ ಖರೀದಿ.

3704 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ಮಂಡ್ಯರವರಿಗೆ ಸಂಸ್ಥೆಗೆ ಬೇಕಾದ ರೆಕ್ಟಿಫೈಡ್ ಸ್ಪಿರೀಟನ್ನು ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡುತ್ತಿದೆಯೇ?

ಆ) ಮೈಸೂರು ಅಸಿಟೇಟ್ ಸಂಸ್ಥೆಗೆ ಬೇಕಾಗ ರೆಕ್ಟಿಫೈಡ್ ಸ್ಪಿರೀಟನ್ನು ಒದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಮೈಸೂರು ಅಸಿಟೇಟ್ ಸಂಸ್ಥೆ ಅನುಭವಿಸುತ್ತಿರುವ ನಷ್ಟದ ಪ್ರಮಾಣವೇನು ಕಳೆದ 3 ವರ್ಷದ ಪ್ರತ್ಯೇಕ ವಿವರಗಳನ್ನೊದಗಿಸುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ರೆಕ್ಟಿಫೈಡ್ ಸ್ಪಿರಿಟಿನ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗುತ್ತಿದೆ.

ಇ) ಕಂಪನಿಯ ಕಳೆದ 3 ವರ್ಷದ ಲಾಭ:ನಷ್ಟದ ವಿವರಗಳು ಈ ಕೆಳಕಂಡಂತಿವೆ.

1988-89 ರೂ. 125 ಲಕ್ಷ (ನಷ್ಟ)

1989-90 ರೂ. 150 ಲಕ್ಷ (ಲಾಭ)

1990-91 ರೂ. 462 ಲಕ್ಷ (ಲಾಭ)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಸರಿನ ಮೇಲೆ ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದಿರುವ ವಿಚಾರ.

3674 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *1991ನೇ ಮಾರ್ಚ್ ತಿಂಗಳ ಅಂತ್ಯದವರೆಗೆ ಹರಿಜನ-ಗಿರಿಜನ ಹೆಸರಿನ ಮೇಲೆ ಎಷ್ಟು ಜನ ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದಿರುವರು?*

ಆ) *ಈ ಸರ್ಟಿಫಿಕೇಟ್ ಆಧಾರದ ಮೇಲೆ ಎಷ್ಟು ಜನ ಸರ್ಕಾರಿ ಉದ್ಯೋಗ ಪಡೆದಿರುವರು?*

ಸುಳ್ಳು ಜಾತಿ ಸರ್ಟಿಫಿಕೇಟನ್ನು ಪಡೆದು ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ವಿವರಗಳನ್ನೊದಗಿಸುವುದು)

ಇ) *ಸುಳ್ಳು ಜಾತಿ ಸರ್ಟಿಫಿಕೇಟನ್ನು ಪಡೆದವರನ್ನು ಯಾವ ರೀತಿ ಪತ್ತೆ ಹಚ್ಚಲಾಗುತ್ತಿದೆ: ಇದಕ್ಕೆ ಸರ್ಕಾರದಲ್ಲಿ ಯಾವುದಾದರು ಸ್ಪೆಶಲ್ ಬ್ರಾಂಚ್ ಇದೆಯೇ ಇಲ್ಲದಿದ್ದರೆ ಇವುಗಳನ್ನು ಪತ್ತೆಹಚ್ಚಲು ಸರ್ಕಾರ ಯಾವರೀತಿ ಯೋಚನೆ ಮಾಡುತ್ತದೆ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 1981 ರಿಂದ 1991ನೇ ಮಾರ್ಚ್ ಅಂತ್ಯದವರೆಗೆ 756 ವ್ಯಕ್ತಿಗಳು ಸುಳ್ಳು ಜಾತಿ ಸರ್ಟಿಫಿಕೇಟ್‌ಗಳನ್ನು, ಪಡೆದಿರುತ್ತಾರೆ.

ಆ) ಸರ್ಕಾರದಲ್ಲಿ ಉದ್ಯೋಗ ಪಡೆದಿರುವವರ ಸಂಖ್ಯೆ - 644

ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳ ಸಂಖ್ಯೆ -10

ಇಂದಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳ ಸಂಖ್ಯೆ-6

(ವಿವರಗಳನ್ನು ಅನುಬಂಧ-ಎ ನಲ್ಲಿ ನೀಡಲಾಗಿದೆ)

ಇ) ಸಾರ್ವಜನಿಕರಿಂದ, ರಾಜ್ಯಸರ್ಕಾರ, ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ಉದ್ದಿಮೆಗಳಿಂದ ಸುಳ್ಳು ಜಾತಿ ಪತ್ರಗಳ ಬಗ್ಗೆ ದೂರುಗಳು ಬಂದಾಗ, ನಾಗರೀಕ ಹಕ್ಕು ಜಾರಿ ಘಟಕದವರು ವಿಚಾರಣೆ ಕೈಗೊಳ್ಳುತ್ತಾರೆ, ಮತ್ತು ಸುಳ್ಳು ಜಾತಿ ಪತ್ರಗಳನ್ನು ಪತ್ತೆ ಮಾಡುತ್ತಾರೆ.

ಅನುಬಂಧ - 'ಎ'

ವೈದ್ಯಕೀಯ ವಿದ್ಯಾರ್ಥಿಗಳು :

1. ಕುಮಾರಿ. ಶಕುಂತಲ ಪೂಜಾರಿ,
   ಡಿ: ಓ ಶ್ರೀ ಲಿಂಗಪ್ಪ ಪೂಡಾರಿ,
   ಮೊದಲನೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿ,
   ಶಾಹಬಾದ್, ಚಿತ್ತಪುರ ತಾಲ್ಲೂಕ್,
   ಗುಲ್ಬರ್ಗ ಜಿಲ್ಲೆ.
2. ಶ್ರೀ ಪಾಲಾಕ್ಷಪ್ಪ,
   ಎಸ್. ಓ, ಸಿ.ಎಂ. ಲಿಂಗಪ್ಪ,